ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

## ZILLA PANCHAYAT OFFICE, BELGAUM-590002


ದೂರವಾಣಿ / Telephone: 0831-2407201, 0831-2407206, 0831-2431640

ಫ್ಯಾಕ್ಸ್/Fax: 0831-2429662

e-mail: ceozpbelgaum@yahoo.com, dsdevbgm@gmail.com


ಕ್ರಸಂ:ಜಿಪ/ಅಭಿವೃದ್ಧಿ/ಗ್ರಾಪಂ/ವಿವ-443/2011-12 ಬೆಳಗಾವಿ,ದಿನಾಂಕ: -2-2014.

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ ಬೆಳಗಾವಿ,
ಖಾನಾಪೂರ, ಬೈಲಹೊಂಗಲ, ಸವದತ್ತಿ,
ರಾಮದುರ್ಗ, ಗೋಕಾಕ, ಹುಕ್ಕೇರಿ, ರಾಯಬಾಗ
ಚಿಕ್ಕೋಡಿ, ಅಥಣಿ ಇವರಿಗೆ.

ವಿಷಯ: ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಪಡಿತರ ಚೀಟಿಗಳ ವಿತರಣೆ ಕಾರ್ಯ ಮಂದಗತಿಯಲ್ಲಿ ಸಾಗಿರುವ ಬಗ್ಗೆ.

ಉಲ್ಲೇಖ: ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಅರೇ ಸರ್ಕಾರಿ ಪತ್ರ ಸಂ:ಆಪೂವಿ/ಸಮೀಕ್ಷೆ/ವಿವ-29/2011-12, ದಿನಾಂಕ:18-2-2014.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಪಡಿತರ ಚೀಟಿ ಇಲ್ಲದ ಕುಟುಂಬಗಳಿಗೆ ವಿತರಣೆ ಕಾರ್ಯ ಸರ್ಕಾರದ ಒಂದು ಮಹತ್ವಕಾಂಕ್ಷಿ ಯೋಜನೆಯಾಗಿರುತ್ತದೆ. ಜಿಲ್ಲೆಯಲ್ಲಿ ಹೊಸ ಪಡಿತರ ಚೀಟಿಗಾಗಿ ಆನ್‌ಲೈನ್ ಮೂಲಕ 4,15,480 ಅರ್ಜಿಗಳು ಸ್ವೀಕರಿಸಲಾಗಿದೆ. ಸದರಿ ಅರ್ಜಿಗಳ ಪೈಕಿ 1,78,760 ಫಲಾನುಭವಿಗಳು ಬಿಪಿಎಲ್ ಪಡಿತರ ಚೀಟಿಗಾಗಿ ಪರಿಶೀಲನೆಯಲ್ಲಿ ಆಯ್ಕೆಯಾಗಿರುತ್ತದೆ. ಇದರ ಪೈಕಿ ಇಲ್ಲಿಯವರೆಗೆ 1,15,119 ಪಡಿತರ ಚೀಟಿಗಳು ಮುದ್ರಿಸಿ ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ವಿತರಣೆಗಾಗಿ ತಲುಪಿಸಲಾಗಿದೆ. ಇಲ್ಲಿಯವರೆಗೆ ಕೇವಲ 21,373 ಪಡಿತರ ಚೀಟಿಗಳು ಮಾತ್ರ ವಿತರಿಸಲಾಗಿದೆ. ದಿನಾಂಕ:21-1-2014 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಪರಿಶೀಲನಾ ಸಭೆಯಲ್ಲಿ ಪಡಿತರ ಚೀಟಿಗಳ ವಿವತರಣಾ ಕಾರ್ಯವು ಮಂದಗತಿಯಲ್ಲಿ ಸಾಗಿರುವುದಕ್ಕೆ ತಮ್ಮ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವದಾಗಿ ಮೇಲಿನ ಉಲ್ಲೇಖಿತ ಪತ್ರದ ಪ್ರಕಾರ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರು ತಿಳಿಯಪಡಿಸಿರುತ್ತಾರೆ.

ಗ್ರಾಮ ಪಂಚಾಯತಿಯಲ್ಲಿ ಸ್ವೀಕೃತಿಯಾಗಿರುವ ಮುದ್ರಿತ ಪಡಿತರ ಚೀಟಿಗಳನ್ನು ಒಂದು ವಾರದೊಳಗಾಗಿ ಸಂಬಂಧಪಟ್ಟ ಫಲಾನುಭವಿಗಳಿಗೆ ತಲುಪಿಸಲು ನಿಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಸೂಚಿಸಿದೆ. ವಿಳಂಬಕ್ಕೆ ಆಸ್ಪದವಿಲ್ಲದೇ ತಕ್ಷಣವೇ ಕಾರ್ಯಪ್ರವರ್ತರಾಗಿ ಎಲ್ಲ ಪಡಿತರ ಚೀಟಿಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲು ಕ್ರಮ ಜರುಗಿಸುವುದು. ತಾವು ಗ್ರಾಮ ಪಂಚಾಯತಿಗೆ ಭೇಟಿ ನೀಡಿದಾಗ ಪಡಿತರ ಚೀಟಿ ವಿತರಿಸಿದ ಬಗ್ಗೆ ಪರಿಶೀಲಿಸುವುದು. ಹಾಗೂ ಗ್ರಾಮ ಪಂಚಾಯತಿಗಳು ಪಡಿತರ ಚೀಟಿದಾರರಿಂದ ರೂ.20/- ಸ್ವೀಕರಿಸಿದ್ದು, ಸದರಿ ಹಣವನ್ನು ಸಹ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಭರಿಸಲು ಕ್ರಮ ಜರುಗಿಸುವುದು. ಇದು ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾಗಿ ರುವುದರಿಂದ ಎಲ್ಲ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಆಸಕ್ತಿಯಿಂದ ಕಾರ್ಯನಿರ್ವಹಿಸುವುದು. ಹಾಗೂ ಮುದ್ರಿತ ಪಡಿತರ ಚೀಟಿಗಳು ಗ್ರಾಮ ಪಂಚಾಯತಿಗೆ ಸ್ವೀಕೃತಿಯಾದ ತಕ್ಷಣವೇ ಸಂಬಂಧಪಟ್ಟವರಿಗೆ ಪೂರೈಸಲು ಕ್ರಮ ಜರುಗಿಸಲು ಸೂಚಿಸಿದೆ.

[ದೀಪ ಚೋಳನ್]
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಪ್ರತಿಯನ್ನು: ಜಿಲ್ಲೆ ಎಲ್ಲ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಇವರ ಮುಖಾಂತರ ಕಳುಹಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ